ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೯

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೇಳನೇ ಅಧಿವೇಶನ

(ಮುಂದುವರೆದ ಉಪವೇಶನ)

ಶುಕ್ರವಾರ, ದಿನಾಂಕ: ೨೭ನೇ ಮಾರ್ಚ್, ೨೦೧೫

---

ಸಮೂಹ – V

೧. ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

೩. ವಸತಿ ಸಚಿವರು

೪. ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು

೫. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು

೬. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

---

### ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ

ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೭೧ (೨೮೨೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಾಮರಾಜನಗರ ಜಿಲ್ಲೆಯಲ್ಲಿರುವ ಪ್ರವಾಸಿ ಸ್ಥಳಗಳು ಯಾವುವು; ಕಳೆದ ಎರಡು ವರ್ಷಗಳಲ್ಲಿ ಈ ಪ್ರವಾಸಿ ತಾಣಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಕಾಮಗಾರಿಗಳು ಯಾವುವು; ಇದಕ್ಕಾಗಿ ಒದಗಿಸಿರುವ ಹಾಗೂ ಖರ್ಚು ಮಾಡಿರುವ ಅಂದಾಜು ಆಯವ್ಯಯ ಎಷ್ಟು;

(ಆ) ಚಾಮರಾಜನಗರ ಜಿಲ್ಲಾ ಪ್ರವಾಸೋದ್ಯಮ ಮಿಷನ್ ೨೦೨೦ ಯೋಜನೆಯನ್ನು ರೂಪಿಸಲಾಗಿದೆಯೇ; ಈ ಯೋಜನೆ ಪ್ರಕಾರ ಹೊಸದಾಗಿ ಗುರುತಿಸಿರುವ ಮತ್ತು ಅಭಿವೃದ್ಧಿಪಡಿಸಲಿರುವ ಪ್ರವಾಸಿ ಸ್ಥಳಗಳು ಯಾವುವು; ಈ ಯೋಜನೆಯ ಪ್ರಕಾರ ಚಾಮರಾಜನಗರ ಜಿಲ್ಲೆಗೆ ದೊರಕಲಿರುವ ಅಂದಾಜು ಮೊತ್ತ ಎಷ್ಟು;

(ಇ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಲಾಗಿದೆಯೇ; ಈ ಯೋಜನೆ ಕೇಂದ್ರದಿಂದ ಮಂಜೂರಾಗಿ ಬಂದಿದೆಯೇ ? (ವಿವರ ಒದಗಿಸುವುದು)

## ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ವೇತನ ನೀಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೨೭೨ (೨೮೪೭) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕ ಉಪನ್ಯಾಸಕರುಗಳಿಗೆ ಪ್ರತಿ ತಿಂಗಳು ವೇತನ ನೀಡುವಲ್ಲಿ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಡಿ ಆಗಾಗ್ಗೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದರಿಂದಾಗಿ ಶಿಕ್ಷಕ ಉಪನ್ಯಾಸಕರುಗಳಿಗೆ ಮತ್ತು ಅವರ ಕುಟುಂಬದವರಿಗೆ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

(ಇ) ಹೆಚ್.ಆರ್.ಎಂ.ಎಸ್. ಅನುಷ್ಠಾನಗೊಂಡ ನಂತರವೂ ಈ ವಿಳಂಬಕ್ಕೆ ಕಾರಣವೇನು;

(ಈ) ಶಿಕ್ಷಕ ಉಪನ್ಯಾಸಕರುಗಳಿಗೆ ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಪ್ರತಿ ತಿಂಗಳು ಸಂಬಳ ಯೋಜನೆ ಮತ್ತು ಯೋಜನೇತರ ಸೌಲಭ್ಯಗಳು ವಿಳಂಬವಾಗದೆ ವಿತರಿಸಲು ಏನು ಕ್ರಮ ಕೈಗೊಳ್ಳಲಾಗುವುದು;

(ಉ) ಶಿಕ್ಷಕರ ಖಾತೆಗೆ ಸಂಬಳವನ್ನು ನೇರ ವರ್ಗಾವಣೆ ಮಾಡುವ ಪ್ರಸ್ತಾವನೆಯು ಇಲಾಖೆಯ ಪರಿಶೀಲನೆಯಲ್ಲಿದೆಯೇ; ಇ–ಟ್ರಾನ್ಸ್‌ಫರ್ ಅನುಷ್ಠಾನಗೊಳಿಸಲು ಏನು ಕ್ರಮ ಕೈಗೊಳ್ಳಲಾಗುವುದು ?

## ಅತಿಥಿ ಉಪನ್ಯಾಸಕರ ಖಾಯಂ

ಪ್ರೊ. ಪಿ.ವಿ. ಕೃಷ್ಣಭಟ್ಟ (ನಾಮನಿರ್ದೇಶನ ಹೊಂದಿದವರು) –

೨೭೩ (೨೮೪೧) ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಮಹಾ ವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟಿದೆ;

(ಆ) ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅತಿಥಿ ಉಪನ್ಯಾಸಕರು ಸೇವೆಯಲ್ಲಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳ ಗುಣಮಟ್ಟ ಹಾಗೂ ನಿರ್ವಹಣೆಯ ಮೇಲೆ ನಿಷೇಧಾತ್ಮಕ ಪರಿಣಾಮ ಆಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಿಗಾಗಿರುವ ಸೇವಾ ಅನುಭವ ಹಾಗೂ ಹಿರಿತನವನ್ನು ಪರಿಗಣಿಸಿ ನಿಗದಿತ ಅರ್ಹತೆಯ ಮಾನದಂಡವನ್ನು ಪೂರ್ಣಗೊಳಿಸುವ ಅಧ್ಯಾಪಕರ ಸೇವೆಯನ್ನು ಖಾಯಂಗೊಳಿಸುವ ನಿಟ್ಟಿನಲ್ಲಿ ಸರ್ಕಾರ ನಿರ್ದಿಷ್ಟ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುವುದೆ;

(ಈ) ಖಾಯಂಗೊಳಿಸಲು ಸಾಧ್ಯವಾಗದ ಅಧ್ಯಾಪಕರ ಸಂಭಾವನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ

ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೭೪ (೨೭೫೫) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಡಗು ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಹಾಗೂ ಮುಖ್ಯಮಂತ್ರಿಗಳ ೧೫ ಅಂಶಗಳ ಕಾರ್ಯಕ್ರಮದಡಿ ೨೦೧೪–೨೦೧೫ರ ಸಾಲಿನಲ್ಲಿ ಎಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; ಇದಕ್ಕೆ ಬಿಡುಗಡೆಗೊಳಿಸಿದ ಮೊತ್ತವೆಷ್ಟು; (ಗ್ರಾಮ ಪಂಚಾಯ್ತಿವಾರು ವಿವರ ನೀಡುವುದು)

(ಆ) ಸದರಿ ಯೋಜನೆಗಳ ಅಡಿಯಲ್ಲಿ ಕಳೆದ ಸಾಲಿನಲ್ಲಿ ಬಹುತೇಕ ಗ್ರಾಮ ಪಂಚಾಯ್ತಿಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯದಿರುವುದಕ್ಕೆ ಕಾರಣಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಭಾಷಾ ನೀತಿ ಉಲ್ಲಂಘನೆ ಮತ್ತು ಶಾಲಾ ಮಾನ್ಯತೆ ನವೀಕರಿಸದ ಶಾಲೆಗಳ ಮಾನ್ಯತೆ ರದ್ದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೭೫ (೨೭೫೩) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಭಾಷಾ ನೀತಿ ಉಲ್ಲಂಘನೆ ಮತ್ತು ಮಾನ್ಯತೆ ನವೀಕರಿಸಿಕೊಳ್ಳದಿರುವ ಪ್ರಕರಣಗಳಲ್ಲಿ ಒಟ್ಟು ಎಷ್ಟು ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಲಾಗಿದೆ; ಹಾಸನ ತಾಲ್ಲೂಕಿನಲ್ಲಿ ಎಷ್ಟು ಪ್ರಕರಣಗಳಿರುತ್ತವೆ; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಮಾನ್ಯತೆ ರದ್ದು ಮಾಡಿರುವಂತಹ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳನ್ನು ಬೇರೆ ಅಧಿಕೃತ ಶಾಲೆಗಳಿಗೆ ಸ್ಥಳಾಂತರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಮಾನ್ಯತೆ ರದ್ದು ಮಾಡಿರುವ ಶಾಲೆಗಳಲ್ಲಿ ೨೦೧೫–೧೬ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ವಿದ್ಯಾರ್ಥಿಗಳ ದಾಖಲಾತಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆಯೇ; ಸೇರಿದ್ದಲ್ಲಿ ಈವರೆಗೆ ಸಲ್ಲಿಸಿರುವ ಅರ್ಜಿಗಳೆಷ್ಟು; ದಾಖಲಾಗಿದ್ದರೆ, ಎಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ;

(ಈ) ಭಾಷಾ ನೀತಿಯ ಉಲ್ಲಂಘನೆ ಹಿನ್ನೆಲೆಯಲ್ಲಿ ಮಾನ್ಯತೆ ರದ್ದು ಮಾಡಿದ್ದಲ್ಲಿ ಸರ್ವೋಚ್ಛ ನ್ಯಾಯಾಲಯದ ಆದೇಶ ಉಲ್ಲಂಘನೆಯಾಗುವುದಿಲ್ಲವೇ; ಈ ಸಂಬಂಧ ಸಾರ್ವಜನಿಕರಲ್ಲಿರುವ ಗೊಂದಲ ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಪ್ರಾದೇಶಿಕ ಭಾಷೆಯ ಚಲನಚಿತ್ರಗಳಿಗೆ ಆದ್ಯತೆ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೧೭೬ (೧೭೫೮) ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಇಲ್ಲಿಯವರೆಗೂ ತುಳು, ಕೊಡವ, ಕೊಂಕಣಿ, ಬಂಜಾರ, ಬ್ಯಾರಿ ಭಾಷೆಗಳಲ್ಲಿ ತಯಾರಾದ ಒಟ್ಟು ಚಿತ್ರಗಳೆಷ್ಟು ಹಾಗೂ ಪ್ರಸ್ತುತ ಎಷ್ಟು ನಿರ್ಮಾಣ ಸಂಸ್ಥೆಗಳು ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿವೆ;

(ಆ) ಮಕ್ಕಳ ಚಿತ್ರ, ಕಾದಂಬರಿ ಆಧಾರಿತ ಚಿತ್ರ, ಐತಿಹಾಸಿಕ ಚಿತ್ರಗಳಿಗೆ ನೀಡುವಂತೆ ಪ್ರಾದೇಶಿಕ ಭಾಷಾ ಚಿತ್ರಗಳಿಗೂ ವಿಶೇಷ ಸಹಾಯಧನ ನೀಡಲು ಸರ್ಕಾರ ಚಿಂತಿಸುವುದೆ;

(ಇ) ಇಲ್ಲಿಯವರೆಗೆ ಎಷ್ಟು ಪ್ರಾದೇಶಿಕ ಚಿತ್ರಗಳಿಗೆ ಸಹಾಯಧನ ನೀಡಲಾಗಿದೆ ?

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಯೋಜನೆಗಳ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೭ (೧೮೦೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೧ ವರ್ಷದಿಂದ ಇಲ್ಲಿಯವರೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ವತಿಯಿಂದ ಯಾವುದಾದರೂ ಯೋಜನೆಗಳು ಅನುಷ್ಠಾನಗೊಂಡಿವೆಯೇ; ಅನುಷ್ಠಾನಗೊಂಡ ಯೋಜನೆಗಳ ಸಂಖ್ಯೆ ಎಷ್ಟು;

(ಆ) ರಾಜ್ಯದಲ್ಲಿರುವ ಯೋಜನೆಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಗಳೆಷ್ಟು; ರಾಜ್ಯ ಸರ್ಕಾರದ ಯೋಜನೆಗಳೆಷ್ಟು; ಕೇಂದ್ರ ಸರ್ಕಾರದಿಂದ ಬಂದ ಅನುದಾನ ಎಷ್ಟು; (ವಿವರ ಮತ್ತು ಜಿಲ್ಲಾವಾರು ಯೋಜನೆಗಳ ಅನುಷ್ಠಾನದ ಫಲಾನುಭವಿಗಳ ವಿವರ ಮತ್ತು ಹಣ ಬಳಕೆಯ ಯೋಜನಾವಾರು ವಿವರ ಒದಗಿಸುವುದು)

(ಇ) ಹೊಸ ಸರ್ಕಾರ ಬಂದ ಮೇಲೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣವೆಷ್ಟು; ಮೀಸಲಿಟ್ಟ ಹಣದಲ್ಲಿ ಬಳಕೆ ಪ್ರಮಾಣವನ್ನು ಜಿಲ್ಲಾವಾರು ವಿವರ ನೀಡುವುದು;

(ಈ) ಮಹಿಳಾ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಿಂದುಳಿದವರ ಮತ್ತು ದೌರ್ಜನ್ಯಕ್ಕೊಳಪಟ್ಟವರ ನೆರವಿಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; ಇಂತಹ ಪ್ರಕರಣಗಳನ್ನು ಗಮನಿಸಿ ಸರ್ಕಾರ ದೌರ್ಜನ್ಯಕ್ಕೊಳಪಟ್ಟವರಿಗೆ ಪರಿಹಾರ ನೀಡಿದೆಯೇ ? (ನೀಡಿದ್ದಲ್ಲಿ, ವಿವರ ನೀಡುವುದು)

## ಜಿಲ್ಲಾ ಪಂಚಾಯತ್ ಕಟ್ಟಡ ನವೀಕರಣ

ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೭೮ (೨೮೩೩) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ಜಿಲ್ಲಾ ಪಂಚಾಯತ್ ಕಟ್ಟಡ ನವೀಕರಣ ಮಾಡಲಾಗಿದೆ. ಈ ನವೀಕರಣಕ್ಕೆ ಆಡಳಿತಾತ್ಮಕ ಅನುಮೋದನೆ ಇದೆಯೇ;

(ಆ) ಜಿಲ್ಲಾ ಪಂಚಾಯತ್ CEO., ಹಾಗೂ ಇತರೆ ಅಧಿಕಾರಿಗಳು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಈ ನವೀಕರಣದ ಹೆಸರಿನಲ್ಲಿ ಸರ್ಕಾರಿ ಹಣ ದುರ್ಬಳಕೆ ಮಾಡಿರುವ ಸುದ್ದಿಗಳು ಸತ್ಯವಾದವೇ;

(ಇ) ಅವ್ಯವಹಾರಗಳು ನಡೆದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವ್ಯವಹಾರ

ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –

೨೭೯ (೨೭೩೩) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗ್ರಾಮೀಣ ಭಾಗದ ಬಡವರಿಗೆ ಉದ್ಯೋಗ ಒದಗಿಸುವ ಉದ್ಯೋಗ ಖಾತ್ರಿ ಯೋಜನೆಗಳಲ್ಲಿ ಅವ್ಯವಹಾರವಾಗಿರುವುದು ಬೆಳಕಿಗೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕಳೆದ ಒಂದೂವರೆ ವರ್ಷಗಳಿಂದ ಯಾವ ಯಾವ ಜಿಲ್ಲೆಗಳಲ್ಲಿ ಅವ್ಯವಹಾರ ಪ್ರಕರಣಗಳು ದಾಖಲಾಗಿವೆ; ಇವುಗಳ ತನಿಖೆ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗಿದೆಯೇ; ಇವುಗಳಲ್ಲಿ ಸಾಬೀತಾಗಿರುವ ಪ್ರಕರಣಗಳೆಷ್ಟು;

(ಇ) ನರೇಗಾ ಅಕ್ರಮಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಯಾವ ಜಿಲ್ಲೆಯಿಂದ ಎಷ್ಟು ವಸೂಲಿ ಮಾಡಲಾಗಿದೆ; ವಸೂಲಿಗೆ ಬಾಕಿ ಇರುವ ಪ್ರಕರಣಗಳೆಷ್ಟು;

(ಈ) ಈ ಅವ್ಯವಹಾರ ಅಕ್ರಮಗಳು ಬೆಳಕಿಗೆ ಬಂದಿದ್ದು ಹೇಗೆ; (ಅವ್ಯವಹಾರದ ಸ್ವರೂಪ, ವಿವರಗಳನ್ನು ಒದಗಿಸುವುದು)

(ಉ) ಇವುಗಳಲ್ಲಿ ಕಾಮಗಾರಿ ನಡೆಸದೇ ಹಣ ಮಂಜೂರಾತಿ ಹಾಗೂ ಕಾಮಗಾರಿ ಮೊತ್ತಕ್ಕಿಂತ ಹೆಚ್ಚು ಹಣ ಬಳಕೆ ಮಾಡಿರುವ ಪ್ರಕರಣಗಳೆಷ್ಟು ? (ಜಿಲ್ಲಾವಾರು ವಿವರ ಒದಗಿಸುವುದು)

## ೨೦೧೪–೧೫ನೇ ಸಾಲಿನಲ್ಲಿ ಹಂಚಿಕೆಯಾದ ಮನೆಗಳ ವಿವರ

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೮೦ (೨೮೧೦) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೪–೧೫ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ವಿವಿಧ ಯೋಜನೆಗಳಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; ಕ್ಷೇತ್ರವಾರು ಮಾಹಿತಿ ನೀಡುವುದು ಹಾಗೂ ಈ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ ಹಾಗೂ ಇನ್ನೂ ಎಷ್ಟು ಹಣ ಬಿಡುಗಡೆಯಾಗಬೇಕಿದೆ;

(ಆ) ಹಾಗಿದ್ದಲ್ಲಿ, ಹಿಂದುಳಿದ ಜಿಲ್ಲೆಯಾದ ರಾಯಚೂರಿನಲ್ಲಿ ಪ.ಜಾ./ಪ.ಪಂಗಡ ಜನಾಂಗದ ಜನಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಪೂರ್ಣ ವಿವರ ಒದಗಿಸುವುದು)

## ವಸತಿ ನಿಗಮದಿಂದ ಹಂಚಿಕೆಯಾದ ನಿವೇಶನಗಳಿಗೆ ಮನೆಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೮೧ (೨೮೭೪) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಲ್ಲಿ ವಸತಿ ನಿಗಮದಿಂದ ರಾಜ್ಯಾದ್ಯಂತ ವಸತಿ ರಹಿತರಿಗೆ ವಿತರಿಸಿದ ನಿವೇಶನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಮಾಹಿತಿಯೊಂದಿಗೆ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ನಿವೇಶನ ಹಕ್ಕುಪತ್ರ ಮತ್ತು ನಿವೇಶನ ಹಸ್ತಾಂತರ ಮಾಡಿದ ಎಷ್ಟು ದಿನದ ಒಳಗೆ ಫಲಾನುಭವಿಯು ಸದರಿ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳತಕ್ಕದ್ದು, ಮತ್ತು ಈ ಸಂಬಂಧ ಇರುವ ಇತರೆ ಷರತ್ತುಗಳು ಯಾವುವು;

(ಇ) ನಿಗದಿತ ಅವಧಿಯೊಳಗೆ ಮನೆ ನಿರ್ಮಿಸಿಕೊಳ್ಳದಿದ್ದಲ್ಲಿ ಹಾಗೂ ಇತರ ಷರತ್ತು ಉಲ್ಲಂಘನೆಯ ಪ್ರಕರಣದಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ವಸತಿ ನಿಗಮದಿಂದ ವಸತಿ ರಹಿತ ಬಡವರಿಗೆ ವಿತರಿಸಿರುವ ನಿವೇಶನದಲ್ಲಿ, ನಿಗಮದಿಂದ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯೊಂದಿಗೆ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೇವಲ ನಿವೇಶನ ಮಂಜೂರಾಗಿ ಸರ್ಕಾರದ ಸಹಾಯಧನಕ್ಕಾಗಿ ಕಾಯುತ್ತಿರುವ ಬಡವರ ನಿವೇಶನವು ಖಾಲಿ ಬಿದ್ದಿರುವುದು ಹಾಗೂ ಇತರ ಪ್ರಭಾವಿಗಳಿಂದ ಒತ್ತುವರಿ ಆಗುತ್ತಿರುವುದು, ನಿವೇಶನಗಳ ಅನಧಿಕೃತ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

### ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡ ಶಿಥಿಲ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮೨ (೧೩೨೯) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿತ್ರದುರ್ಗದಲ್ಲಿರುವ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಕಟ್ಟಡವನ್ನು ಯಾವಾಗ ನಿರ್ಮಾಣ ಮಾಡಲಾಯಿತು;

(ಆ) ಸದರಿ ಕಟ್ಟಡದ ಜೀರ್ಣೋದ್ಧಾರಕ್ಕೆ (ನಿರ್ವಹಣೆಗೆ) ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳೇನು;

(ಇ) ಸದರಿ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಹೊಸ ಕಟ್ಟಡ ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

### ಶಿಕ್ಷಕರಿಗೆ ಯೋಜನಾ ಬಾಬ್ತಿನಿಂದ ಯೋಜನೇತರ ಬಾಬ್ತಿಗೆ ಪರಿವರ್ತನೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೨೮೩ (೨೮೪೮) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಹಾಗೂ ಅನುದಾನಿತ, ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಂಬಳವನ್ನು ಯೋಜನಾ ಬಾಬ್ತಿನಿಂದ ಯೋಜನೇತರ ಬಾಬ್ತಿಗೆ ಪರಿವರ್ತಿಸಲು ಇರುವ ನಿಯಮಗಳು ಯಾವುವು;

(ಆ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ (ಚಿಕ್ಕೋಡಿ) ಶೈಕ್ಷಣಿಕ ಜಿಲ್ಲೆಗಳ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಾಲಾ ಕಾಲೇಜುಗಳ ಪ್ರತಿಯೊಬ್ಬ ಬೋಧಕ/ಬೋಧಕೇತರರು ಯೋಜನಾ ಬಾಬ್ತಿನ ಅಡಿ ಎಷ್ಟು ವರ್ಷಗಳಿಂದ ಸಂಬಳ ಪಡೆಯುತ್ತಿದ್ದಾರೆ ? (ಶಾಲಾ/ಕಾಲೇಜುವಾರು ಪ್ರತಿಯೊಬ್ಬ ಶಿಕ್ಷಕರ ವಿವರ ನೀಡುವುದು)

## ಸಿ.ಇ.ಟಿ. ಶುಲ್ಕ ನಿಯಂತ್ರಣ ಕಾಯಿದೆ ವಿಳಂಬ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೮೪ (೧೩೯೬) ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿ.ಇ.ಟಿ. ಶುಲ್ಕಕ್ಕೆ ಸಂಬಂಧಿಸಿದಂತೆ ಕಳೆದ ೮ ವರ್ಷದಿಂದ ಜಾರಿಗೆ ಬಂದಿರುವ ೨೦೦೬ರ ಕಾಯಿದೆ ಅನುಷ್ಠಾನ ವಿಳಂಬವಾಗಲು ಕಾರಣವೇನು; (ವಿವರ ನೀಡುವುದು)

(ಆ) ಶುಲ್ಕ ನಿಯಂತ್ರಣ ಸಮಿತಿ ರೂ. ೧.೦೦ ಲಕ್ಷದಿಂದ ರೂ. ೪.೪೧ ಲಕ್ಷದವರೆಗೆ ಶುಲ್ಕ ನಿಗದಿ ಮಾಡುವಂತೆ, ಕಾಲೇಜುಗಳು ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;

(ಇ) ಇದು ಹಾಲಿ ಶುಲ್ಕಕ್ಕಿಂತ ೫ ರಿಂದ ೧೦ ಪಟ್ಟು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಶುಲ್ಕದ ಹೆಚ್ಚಳದಿಂದ ವಿದ್ಯಾರ್ಥಿ/ಪೋಷಕರುಗಳಿಗಾಗುವ ತೊಂದರೆಯನ್ನು ನಿವಾರಿಸಲು ಸರ್ಕಾರದ ತಕ್ಷಣದ ಕ್ರಮವೇನು;

(ಉ) ಸಿ.ಇ.ಟಿ. ಶುಲ್ಕದ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಿ, ಬಡ ಗ್ರಾಮೀಣ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲಾಗುವುದು ? (ವಿವರ ನೀಡುವುದು)

**ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ ೨೦೦೭ನ್ನು ಜಾರಿಗೊಳಿಸುವ ಬಗ್ಗೆ**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೨೮೫ (೨೭೮೬) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ ೨೦೦೭ನ್ನು ಯಾವಾಗಿನಿಂದ ಜಾರಿಗೊಳಿಸಲಾಗಿದೆ;

(ಆ) ಈ ಕಾಯ್ದೆಯನ್ವಯ ಹಿರಿಯ ನಾಗರಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆಯೇ;

(ಇ) ಕೇಂದ್ರ ಸರ್ಕಾರವು ಹಿರಿಯ ನಾಗರಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ನಿಗದಿತ ವಯೋಮಿತಿಯನ್ನು ೬೦ಕ್ಕೆ ಇಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ನಮ್ಮ ರಾಜ್ಯದಲ್ಲಿ ವಯೋಮಿತಿಯನ್ನು ೬೦ಕ್ಕೆ ನಿಗದಿಗೊಳಿಸಿ ಸರ್ಕಾರಿ ಆದೇಶವನ್ನು ಯಾವ ದಿನಾಂಕದಂದು ಹೊರಡಿಸಲಾಗಿದೆ;

(ಉ) ಆದೇಶ ಹೊರಡಿಸಿರದಿದ್ದಲ್ಲಿ, ಯಾವಾಗ ಹೊರಡಿಸಲಾಗುವುದು ?

ವಿ. ಶ್ರೀಶ್

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ೩, ಕಾ.ಸೂ. 1266, ಪ್ರತಿಗಳು 1500